## ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಡಿ-7897/2015/ಡಿಆರ್‌ಇ-1

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ: 22/2/2018

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(1) ರನ್ವಯ ವರದಿ

**ವಿಷಯ:** ಶ್ರೀ.ಕೆ.ಎಂ.ಕೃಷ್ಣೇಗೌಡ, ಸೈಟ್ ಇಂಜಿನಿಯರ್, ನಿರ್ಮಿತಿ ಕೇಂದ್ರ, ಹೊಸದುರ್ಗ ತಾಲ್ಲೂಕು, ಮತ್ತು (2) ಶ್ರೀ.ಕೆ.ಜಿ.ಮೂಡಲಗಿರಿಯಪ್ಪ, ಯೋಜನಾ ವ್ಯವಸ್ಥಾಪಕರು, ನಿರ್ಮಿತಿ ಕೇಂದ್ರ, ಚಿತ್ರದುರ್ಗ, – ಇವರ ವಿರುದ್ಧ ಸಲ್ಲಿಸಿದ ದೂರಿನ ಸಂಬಂಧ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿನ ವರದಿ.

******

1. ಶ್ರೀ.ದೇವೇಂದ್ರಪ್ಪ, ಬಿನ್ ಹನುಮಂತಪ್ಪ ಕಾವಲ್‌ದಾರ್, ಬಾಗೂರು ಗ್ರಾಮ, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು (1) ಶ್ರೀ.ಕೆ.ಎಂ.ಕೃಷ್ಣೇಗೌಡ, ಸೈಟ್ ಇಂಜಿನಿಯರ್, ನಿರ್ಮಿತಿ ಕೇಂದ್ರ, ಹೊಸದುರ್ಗ ತಾಲ್ಲೂಕು, ಮತ್ತು (2) ಶ್ರೀ.ಕೆ.ಜಿ.ಮೂಡಲಗಿರಿಯಪ್ಪ, ಯೋಜನಾ ವ್ಯವಸ್ಥಾಪಕರು, ನಿರ್ಮಿತಿ ಕೇಂದ್ರ, ಚಿತ್ರದುರ್ಗ, (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 9 ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2. ದೂರುದಾರರು ತಮ್ಮ ದೂರಿನಲ್ಲಿ ಬಾಗೂರು ಗ್ರಾಮದ ಶ್ರೀ ಪ್ರಸನ್ನ ಚನ್ನಕೇಶವಸ್ವಾಮಿ ದೇವಸ್ಥಾನಕ್ಕೆ ಸಂಬಂಧಪಟ್ಟಂತೆ ದೇವಸ್ಥಾನದ ನಿಶ್ಚಿತ ಠೇವಣಿಯಲ್ಲಿ ರೂ.8.50 ಲಕ್ಷಗಳ ತಾಂತ್ರಿಕ ಮಂಜೂರಾತಿ ಪಡೆದು ಧಾರ್ಮಿಕ ದತ್ತಿ ಇಲಾಖೆ, ಬೆಂಗಳೂರು, ತಾಲ್ಲೂಕು ಮುಜರಾಯಿ ಇಲಾಖೆ, ಜಿಲ್ಲಾ ಉಪ ವಿಭಾಗಾಧಿಕಾರಿ ಹಾಗೂ ಜಿಲ್ಲಾಧಿಕಾರಿಗಳ ಕಚೇರಿ ಇಲಾಖೆಗಳ ಮೂಲಕ ರವಾನಿಸಿ ಧಾರ್ಮಿಕ ದತ್ತಿ ಇಲಾಖೆಯ ಕೇಂದ್ರ ಸ್ಥಾನಿಕ ಅಧಿಕಾರಿಗಳಿಂದ ಅನುಮೋದನೆ ಪಡೆದಿರುತ್ತಾರೆ. ತಾಂತ್ರಿಕ ಅನುಮೋದನೆಯಂತೆ ಜಿಲ್ಲಾ ನಿರ್ಮಿತಿ ಕೇಂದ್ರದವರು ರಥ ರಿಪೇರಿ ಮಾಡಿಕೊಡಲು ವಹಿಸಿಕೊಂಡಿದ್ದು, ರಥದ 4 ಚಕ್ರಗಳನ್ನು ಮಾತ್ರ ಹೊಸದಾಗಿ ನಿರ್ಮಿಸಿ ಅಳವಡಿಸಿದ್ದು, ಉಳಿದ ಕೆಲಸಗಳು ಅಂದರೆ ರಥದಲ್ಲಿ ಹೋಗಿರುವ ಗೊಂಬೆಗಳು, ದೇವರು ಕೂರುವ ಮಂದಾಸನ ಹಾಗೂ ರಥದ ಹಂತಹಂತವಾಗಿರುವ ಮರದ ಚೌಕಟ್ಟುಗಳು ಮರು ಜೋಡಣೆಯಾಗಬೇಕಾಗಿದ್ದು, ರಥ ನಿರ್ಮಿಸಲು ಅದಕ್ಕೆ ಬೇಕಾಗುವ ಸಾಮಾಗ್ರಿಗಳಾದ ಖದರುಗಳು ಮತ್ತು ಮರದ ಕಟ್ಟೆ ಸಾಮಾಗ್ರಿಗಳನ್ನು ತಾಂತ್ರಿಕ ಅನುಮೋದನೆ ಪ್ರಕಾರ ರಥದ 4 ಚಕ್ರಗಳನ್ನು ಮಾತ್ರ ಹೊರತುಪಡಿಸಿ ಉಳಿದ ಕೆಲಸವನ್ನು ಮಾಡಿರುವುದಿಲ್ಲ. ಈ ವಿಚಾರವನ್ನು ಮುಜರಾಯಿ ಅಧಿಕಾರಿಗಳ ಗಮನಕ್ಕೆ ತಂದರೂ ಸಹ ಅವರು ಯಾವುದೇ ಕ್ರಮವನ್ನು ಕೈಗೊಂಡಿಲ್ಲವೆಂದು ಆಪಾದಿಸಿ ದೂರನ್ನು ಸಲ್ಲಿಸಿರುತ್ತಾರೆ.

3. ದೂರುದಾರರ ದೂರಿನ ಮೇಲೆ ಆಕ್ಷೇಪಣೆಯನ್ನು ಸಲ್ಲಿಸುವಂತೆ ಎದುರುದಾರರಿಗೆ ಆದೇಶಿಸಲಾಗಿತ್ತು. ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿದ್ದು, ಆಕ್ಷೇಪಣೆಯಲ್ಲಿ ಮಾನ್ಯ ಜಿಲ್ಲಾಧಿಕಾರಿಗಳು, ಚಿತ್ರದುರ್ಗ ಜಿಲ್ಲೆ, ಇವರ ಆದೇಶ ಸಂ.ಡಿವಿಎಸ್/2/ಸಿಆರ್.300/2012–13 ದಿ.14/3/13 ರಂತೆ ಹೊಸದುರ್ಗ ತಾಲ್ಲೂಕಿನ ಬಾಗೂರು ಗ್ರಾಮದ ಶ್ರೀ ಚನ್ನಕೇಶವಸ್ವಾಮಿ ದೇವಸ್ಥಾನದ ರಥದ ಗಾಲಿಗಳ ದುರಸ್ತಿ ಕಾರ್ಯಕ್ಕಾಗಿ ರೂ.8.50 ಲಕ್ಷಗಳಿಗೆ ಆಡಳಿತಾತ್ಮಕ ಮಂಜೂರಿ ನೀಡಲಾಗಿರುತ್ತದೆ. ರಥದ ಗಾಲಿಗಳ ದುರಸ್ತಿ ಕಾರ್ಯಕ್ಕಾಗಿ ಶಿವಮೊಗ್ಗ ವೃತ್ತದ ಲೋಕೋಪಯೋಗಿ ಇಲಾಖೆಯ ಅನುಸೂಚಿತ ದರಪಟ್ಟಿಯಂತೆ 8.50 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿ ದಿ.8/3/13 ರಂದು ತಾಂತ್ರಿಕ ಮಂಜೂರಾತಿ ನೀಡಲಾಗಿರುತ್ತದೆ. ಹಾಗೂ ಸದರಿ ಅಂದಾಜು ಪಟ್ಟಿಯನ್ನು ಅಪರ ಜಿಲ್ಲಾಧಿಕಾರಿಗಳು, ಚಿತ್ರದುರ್ಗ ಜಿಲ್ಲೆ, ಇವರು ಅನುಮೋದಿಸಿರುತ್ತಾರೆ. ರಥದ ಚಕ್ರದ ಗಾಲಿಗಳನ್ನು ಅನುಮೋದಿತ ಅಂದಾಜು ಪಟ್ಟಿ ಹಾಗೂ ಆಡಳಿತಾತ್ಮಕ ಅನುಮೋದನೆಯ ಪ್ರಕಾರ ಕಾರ್ಯ ನಿರ್ವಹಿಸಿ ದುರಸ್ತಿಪಡಿಸಲಾಗಿರುತ್ತದೆ. ಕರ್ನಾಟಕ ಸರ್ಕಾರವು ನಿರ್ಮಿತಿ ಕೇಂದ್ರಗಳಿಗೆ ಕೆ.ಟಿ.ಟಿ.ಪಿ.ಆಕ್ಟ್ 1999 ಕಲಂ 4 (ಜಿ) ಅಡಿಯಲ್ಲಿ ವಿನಾಯಿತಿ ನೀಡಿರುತ್ತದೆ. ಮಂಜೂರಾದ ಅಂದಾಜು ಪಟ್ಟಿಯ ಪ್ರಕಾರ ಎಲ್ಲಾ ಐಟಂಗಳನ್ನು ಸಮರ್ಪಕವಾಗಿ ನಿರ್ವಹಿಸಲಾಗಿರುತ್ತದೆಯೆಂದು ಹೇಳಿರುತ್ತಾರೆ.

4. ಎದುರುದಾರರ ಆಕ್ಷೇಪಣೆಯ ಮೇಲೆ ದೂರುದಾರರ ವಾರಸುದಾರರು ಪ್ರತ್ಯುತ್ತರವನ್ನು ಸಲ್ಲಿಸಿದ್ದು, ಪ್ರತ್ಯುತ್ತರದಲ್ಲಿ ಯೋಜನಾ ವ್ಯವಸ್ಥಾಪಕರು, ನಿರ್ಮಿತಿ ಕೇಂದ್ರ, ಚಿತ್ರದುರ್ಗ ಇವರು ತಮ್ಮ ಅನುಪಾಲನಾ ವರದಿಯಲ್ಲಿ ಕಾಮಗಾರಿಗೆ ತಗುಲಿದ ವೆಚ್ಚಕ್ಕೆ ಸಂಬಂಧಿಸಿದಂತೆ ಒಟ್ಟು 10 ವೋಚರ್‌ಗಳ ಪ್ರತಿಗಳನ್ನು ಲಗತ್ತಿಸಿದ್ದು, ನ್ಯಾಷನಲ್ ಫರ್ನಿಚರ್ ಸಪ್ಲೈಯರ್ಸ್ ಮತ್ತು ವುಡ್ ಇಂಡಸ್ಟ್ರೀಸ್ ಚಿತ್ರದುರ್ಗ ಇವರು ಹಣ ಸ್ವೀಕರಿಸಿದ ಬಗ್ಗೆ ಮಾಹಿತಿ ಇರುವುದಿಲ್ಲ. ಇವರಿಗೆ ಹಣವನ್ನು ಚೆಕ್ ಮೂಲಕ ನೀಡಿರುವುದಿಲ್ಲವೆನ್ನುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಕಾರ್ಮಿಕರು ಹಣ ಸ್ವೀಕರಿಸಿದ ಕಾಲಂನಲ್ಲಿ ಅವರ ಸಹಿಯನ್ನು ಫೋರ್ಜರಿ ಮಾಡಲಾಗಿದೆ ಮತ್ತು ನಕಲಿ ಬಿಲ್ಲುಗಳನ್ನು ಸೃಷ್ಟಿ ಮಾಡಿರುತ್ತಾರೆ. ಡೆಬಿಟ್ ವೋಚರ್‌ನ ಅಮೌಂಟ್ ಕಾಲಂನಲ್ಲಿ ತಿದ್ದಿರುತ್ತಾರೆ. ಕಾಮಗಾರಿ ಪೂರ್ಣಗೊಳಿಸದೆ ಪರಿಶೀಲನಾ ವರದಿ ಸಿದ್ಧಪಡಿಸಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆಯೆಂದು ಹೇಳಿರುತ್ತಾರೆ.

5. ದೂರುದಾರರ ದೂರನ್ನು ಪರಿಶೀಲಿಸಿದಾಗ, ರಥದ ಕೆಲಸವನ್ನು ಸಂಪೂರ್ಣವಾಗಿ ನಿರ್ವಹಿಸಿಲ್ಲವೆಂದು ಹೇಳಿರುತ್ತಾರೆ ಮತ್ತು ಪ್ರತ್ಯುತ್ತರದಲ್ಲಿ ಬಿಲ್ಲುಗಳನ್ನು ಸೃಷ್ಟಿ ಮಾಡಿರುತ್ತಾರೆ ಹಾಗೂ ಕಾರ್ಮಿಕರ ಸಹಿಗಳನ್ನು ಫೋರ್ಜರಿ ಮಾಡಿರುತ್ತಾರೆಂದು ಆಪಾದಿಸಿರುವುದು ಕಂಡುಬರುತ್ತದೆ. ಆದ್ದರಿಂದ, ರಥದ ಕಾಮಗಾರಿಯನ್ನು ಅಂದಾಜು ಪಟ್ಟಿಯಂತೆ ನಿರ್ವಹಿಸಲಾಗಿದೆಯೇ ಮತ್ತು ಯಾವ ಹಂತದಲ್ಲಿ, ಯಾವ ಕೆಲಸಕ್ಕೆ ಎಷ್ಟು ಹಣವನ್ನು ಪಾವತಿ ಮಾಡಲಾಗಿದೆ ಎನ್ನುವ ಬಗ್ಗೆ ದಾಖಲಾತಿಗಳನ್ನು ಮತ್ತು ರಥದ ಕಾಮಗಾರಿಯನ್ನು ಪರಿಶೀಲಿಸುವುದು ಅಗತ್ಯವಿದೆಯೆಂದು ಕಂಡುಬಂದ ಕಾರಣ, ದೂರುದಾರರ ದೂರಿನ ಬಗ್ಗೆ ತನಿಖೆ ನಡೆಸಿ ದಾಖಲಾತಿಗಳ ಸಮೇತ ವರದಿ ಸಲ್ಲಿಸುವಂತೆ ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಚಿತ್ರದುರ್ಗ ಇವರಿಗೆ ಆದೇಶಿಸಲಾಗಿತ್ತು.

6. ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಚಿತ್ರದುರ್ಗ ಇವರು ವರದಿಯನ್ನು ಸಲ್ಲಿಸಿದ್ದು, ವರದಿಯಲ್ಲಿ ಈ ಕೆಳಗಿನಂತೆ ಅಭಿಪ್ರಾಯವನ್ನು ನೀಡಿರುತ್ತಾರೆ.

"ಅರ್ಜಿದಾರರಾದ ಶ್ರೀ.ದೇವೇಂದ್ರಪ್ಪ, ಬಾಗೂರು ಗ್ರಾಮ, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ರವರು ಪ್ರಧಾನ ಕಚೇರಿಗೆ ಪ್ರಪತ್ರ 1 ಮತ್ತು 2 ರಲ್ಲಿ ಸಲ್ಲಿಸಿದ್ದ ದೂರು ಅರ್ಜಿಯಲ್ಲಿ ಮಾಡಿರುವ ಆಪಾದನೆಗಳ ಕುರಿತು ಪರಿಶೀಲಿಸಿ ವರದಿ ನೀಡುವಂತೆ ಡಿಎಸ್‌ಪಿ, ಕ.ಲೋ, ಚಿತ್ರದುರ್ಗ ರವರಿಗೆ ಸೂಚಿಸಲಾದ ಮೇರೆಗೆ ಸದರಿ ಅಧಿಕಾರಿಯವರು ಅರ್ಜಿಯಲ್ಲಿ ಮಾಡಲಾದ ಆಪಾನೆಗಳ ಬಗ್ಗೆ ಪರಿಶೀಲಿಸುವ ಸಂಬಂಧ ಹೊಸದುರ್ಗ ತಾಲ್ಲೂಕು, ಬಾಗೂರು ಗ್ರಾಮಕ್ಕೆ ಖುದ್ದಾಗಿ ಭೇಟಿ ನೀಡಿ ಅಲ್ಲಿ ಶ್ರೀ.ಪ್ರಸನ್ನಚನ್ನಕೇಶವಸ್ವಾಮಿ ದೇವಸ್ಥಾನದ ರಥವನ್ನು ಪರಿಶೀಲಿಸಿ ಆ ಬಗ್ಗೆ ಫೋಟೋಗಳನ್ನು ಸಹ ಚಿತ್ರೀಕರಿಸಿರುತ್ತಾರೆ. ಸದರಿ ಪರಿಶೀಲನಾ ಕಾಲಕ್ಕೆ ರಥದ ಚಕ್ರಗಳಲ್ಲಿ ಅಲ್ಲಲ್ಲಿ ಬಿರುಕುಗಳು ಮೂಡಿದ್ದು, ತುಂಡು ಮತ್ತು ಚಕ್ಕೆಗಳನ್ನು ಹೊಡೆದಿರುವುದು ಕಂಡುಬಂದಿರುತ್ತದೆ. ಅಲ್ಲದೆ ಈ ಬಗ್ಗೆ ಸದರಿ ಬಾಗೂರು ಗ್ರಾಮದ ಗ್ರಾಮಸ್ಥರನ್ನು ಭೇಟಿ ಮಾಡಿ ಅಭಿಪ್ರಾಯವನ್ನು ಸಂಗ್ರಹಿಸಲಾಗಿ ಸದರಿ ರಥಕ್ಕೆ 4 ಹೊಸ ಚಕ್ರಗಳನ್ನು ನಿರ್ಮಾಣ ಮಾಡಿದ್ದು, ಸದರಿ ಕಾಮಗಾರಿಯು ಕಳಪೆ ಗುಣಮಟ್ಟದ್ದಾಗಿರುತ್ತದೆ ಎಂದು ಅಸಮಾಧಾನವನ್ನು ವ್ಯಕ್ತಪಡಿಸಿರುತ್ತಾರೆ.

ರಥಕ್ಕೆ ಹೊಸದಾಗಿ ನಿರ್ಮಾಣ ಮಾಡಿದ 4 ಚಕ್ರಗಳ ಗುಣಮಟ್ಟ ಮತ್ತು ಬಳಸಿರಬಹುದಾದ ಅಂದಾಜು ಮರದ ಅಳತೆ ಹಾಗೂ ಮಾಡಿರಬಹುದಾದ ಅಂದಾಜು ವೆಚ್ಚದ ಬಗ್ಗೆ ಚನ್ನಗಿರಿ ತಾಲ್ಲೂಕು ಗೊಪ್ಪೇನಹಳ್ಳಿ ವಾಸಿಗಳಾದ ರಥಗಳನ್ನು ನಿರ್ಮಾಣ ಮಾಡುವವರಲ್ಲಿ ತಜ್ಞರಾದ ಶ್ರೀ.ಸುರೇಶಚಾರ್ ಹಾಗೂ ಶ್ರೀ.ಹರೀಶಚಾರ್ ಇವರುಗಳಿಂದ ಪರಿಶೀಲನೆ ಮಾಡಿಸಲಾಗಿ, ಸದರಿ ರಥದ ಚಕ್ರಗಳನ್ನು ನಿರ್ಮಾಣ ಮಾಡಲು ಆಸ್ಟ್ರೇಲಿಯಾ ಹೊನ್ನೆ ಜಾತಿಯ ಮರವನ್ನು ಬಳಸಿದ್ದು, ಅಂದಾಜು 180 ಘ.ಚ.ಅಡಿಯ ಅಳತೆಯಷ್ಟು ಮರವನ್ನು ಉಪಯೋಗಿಸಲಾಗಿರುತ್ತದೆ. ಸದರಿ ನಿರ್ಮಾಣಕ್ಕೆ 2013-14ನೇ ಸಾಲಿನಲ್ಲಿ ಸುಮಾರು 234000/- (ಕಟ್ಟಿಗೆ ಬೆಲೆ) ಮತ್ತು ಕೂಲಿ ವೆಚ್ಚ ರೂ.40,000/- ಗಳು ತಗಲಿರಬಹುದೆಂದು ತಿಳಿಸಿದ್ದು, ಈ ಬಗ್ಗೆ ಅವರುಗಳ ಹೇಳಿಕೆಗಳನ್ನು ಸಹ ಪಡೆದಿರುತ್ತಾರೆ.

ಮುಂದುವರೆದು ವಿಚಾರಣೆ ಸಂಬಂಧ ಬಾಗೂರು ಗ್ರಾಮದ ವಾಸಿಗಳಾದ ಶ್ರೀ.ರಂಗನಾಥ ಬಿನ್ ಚಿನ್ನಸ್ವಾಮಿ, ಶ್ರೀ.ಕೆ.ಗಣೇಶರೆಡ್ಡಿ ಬಿನ್, ಕೇಶವಪ್ಪ, ಶ್ರೀ.ಬಿ.ಎನ್.ಕೇಶವಮೂರ್ತಿ ಬಿನ್ ನರಸಿಂಹರೆಡ್ಡಿ, ಶ್ರೀ.ಬಿ.ಡಿ.ಸುಪ್ರೀತ್ ಬಿನ್ ಎಂ.ತಿಪ್ಪೇಶ್ ಇವರುಗಳನ್ನು ವಿಚಾರಣೆ ಮಾಡಿ ಹೇಳಿಕೆಗಳನ್ನು ಪಡೆದಿದ್ದು, ಅವರುಗಳ ಹೇಳಿಕೆ ಪ್ರಕಾರ ರಥದ 4 ಚಕ್ರಗಳ ನಿರ್ಮಾಣ ಕಾಮಗಾರಿಯು ಕಳಪೆ ಗುಣಮಟ್ಟದಿಂದ ಕೂಡಿರುವುದು ಹಾಗೂ ಚಕ್ರಗಳ ಚಲನೆಗೆ ತೊಂದರೆಯಾಗಬಾರದೆಂಬುವ ಉದ್ದೇಶದಿಂದ ಗ್ರಾಮಸ್ಥರೇ ಹಣ ಸಂಗ್ರಹಣೆ ಮಾಡಿ ಕಬ್ಬಿಣದ ಹಳಿಗಳ ಪಟ್ಟಿಗಳನ್ನು ಅಳಡಿಸಿರುವ ವಿಷಯವು ತಿಳಿದುಬಂದಿದ್ದು, ಚಕ್ರಗಳ ನಿರ್ಮಾಣಕ್ಕೆ 3 ರಿಂದ 3 1/2 ಲಕ್ಷಗಳ ಮೊತ್ತವು ಮಾತ್ರ ವೆಚ್ಚವಾಗಬಹುದಾಗಿದ್ದು, ಆದರೆ ನಿರ್ಮಿತಿ ಕೇಂದ್ರದಿಂದ ರೂ.8 ಲಕ್ಷಗಳಿಗೂ ಮೇಲ್ಪಟ್ಟ ವೆಚ್ಚವನ್ನು ಮಾಡಿರುವುದು ಅನುಮಾನಗಳಿಗೆ ಆಸ್ಪದ ಕೊಡುತ್ತದೆಯೆನ್ನುವ ಅಂಶವು ತಿಳಿದುಬರುತ್ತದೆ.

ಹಾಗೆಯೇ ರಥದ ಗಾಲಿಗಳ ನಿರ್ಮಾಣದ ಮೇಲುಸ್ತುವಾರಿ ಕಾರ್ಯವನ್ನು ಶ್ರೀ.ಕೃಷ್ಣೇಗೌಡ, ಸೈಟ್ ಇಂಜಿನಿಯರ್, ನಿರ್ಮಿತಿ ಕೇಂದ್ರ, ಚಿತ್ರದುರ್ಗ ಇವರಿಗೆ ವಹಿಸಿದ್ದರೂ ಸಹಿತ ಸದರಿಯವರು ಸೂಕ್ತವಾಗಿ ಉಸ್ತುವಾರಿ ಕಾರ್ಯವನ್ನು ನಡೆಸದೆ ಹಾಗೂ ರಥದ ಗಾಲಿಗಳ ನಿರ್ಮಾಣ ಕಾರ್ಯಕ್ಕೆ ಅವಶ್ಯಕ ವಸ್ತುಗಳನ್ನು ಖರೀದಿಸುವಲ್ಲಿ ಸೂಕ್ತ ಕ್ರಮ ಕೈಗೊಳ್ಳದೆ ಮೂರನೇ ವ್ಯಕ್ತಿಯಾದ ಬಾಗೂರು ಗ್ರಾಮದ ಅಂಜಿನಪ್ಪ ಎನ್ನುವ ಖಾಸಗಿ ವ್ಯಕ್ತಿಯ ಮುಖಾಂತರ ಎಲ್ಲಾ ಕೆಲಸಗಳನ್ನು ಮಾಡಿಸಿರುವುದು ಹಾಗೂ ಸದರಿ ಖಾಸಗಿ ವ್ಯಕ್ತಿಗೆ ಈ ಕಾಮಗಾರಿಯ ಬಗ್ಗೆ ಯಾವುದೇ ಸರ್ಕಾರಿ ಅಧಿಕಾರಿಗಳು ಸೂಕ್ತ ಸೂಚನೆ ನೀಡದೆ ಇರುವುದು

ಮತ್ತು ಈ ಕಾರ್ಯಕ್ಕೆ ಯಾವುದೇ ಕಾರ್ಯಾದೇಶ ಮಾಡದೇ ಇರುವುದು ಸ್ಪಷ್ಟವಾಗಿ ಕಂಡುಬರುತ್ತದೆ.

ಆದ್ದರಿಂದ ಅರ್ಜಿ ವಿಚಾರಣಾ ಕಾಲಕ್ಕೆ ಸಂಗ್ರಹಿಸಿದ ದಾಖಲೆಗಳು ಹಾಗೂ ಮಾಹಿತಿ ಮತ್ತು ಅಭಿಪ್ರಾಯದ ಆಧಾರದ ಮೇಲೆ ತಿಳಿದುಬರುವುದೇನೆಂದರೆ, ಹೊಸದುರ್ಗ ತಾಲ್ಲೂಕು, ಬಾಗೂರು ಗ್ರಾಮದ ಶ್ರೀ.ಪ್ರಸನ್ನಚನ್ನಕೇಶವಸ್ವಾಮಿ ದೇವಸ್ಥಾನದ ರಥಕ್ಕೆ ಹೊಸದಾಗಿ 4 ಚಕ್ರಗಳನ್ನು ನಿರ್ಮಾಣ ಮಾಡಲು ರೂ.8,50,000/- ಗಳ ಅನುದಾನವನ್ನು ಬಿಡುಗಡೆಗೊಳಿಸಿ ಜಿಲ್ಲಾಧಿಕಾರಿಗಳು, ಚಿತ್ರದುರ್ಗ ಜಿಲ್ಲೆ ರವರು ಆಡಳಿತಾತ್ಮಕ ಅನುಮೋದನೆಯನ್ನು ನೀಡಿ ದಿ.14/3/13 ರಂದು ಆದೇಶ ಹೊರಡಿಸಿರುತ್ತಾರೆ. ಸದರಿ ಆದೇಶದ ಆಧಾರದ ಮೇಲೆ ಯೋಜನಾ ವ್ಯವಸ್ಥಾಪಕರು, ನಿರ್ಮಿತಿ ಕೇಂದ್ರ, ಚಿತ್ರದುರ್ಗ ರವರು ಸೈಟ್ ಇಂಜಿನಿಯರ್ ಆದ ಕೃಷ್ಣೇಗೌಡ ಇವರನ್ನು ಮೇಲುಸ್ತುವಾರಿಯನ್ನಾಗಿ ನೇಮಿಸಿ ಕಾಮಗಾರಿ ಕೈಗೊಳ್ಳುವಂತೆ ಆದೇಶಿಸಿರುತ್ತಾರೆ. ಆದರೆ ಸದರಿ ಅಧಿಕಾರಿಯವರು ಈ ಕಾಮಗಾರಿಗೆ ಸಂಬಂಧಿಸಿದಂತೆ ಸೂಕ್ತ ಕಾರ್ಯಾದೇಶ ನೀಡದೆ ಹಾಗೂ ಸೂಕ್ತ ಮೇಲುಸ್ತುವಾರಿಯನ್ನು ನಡೆಸದೆ 3ನೇ ವ್ಯಕ್ತಿಯಿಂದ ಕಳಪೆ ಗುಣಮಟ್ಟದ ಕೆಲಸಗಳನ್ನು ಮಾಡಿಸಿದ್ದು, ಬಿಡುಗಡೆಯಾದ ಅನುದಾನವನ್ನು ಸೂಕ್ತ ಮಟ್ಟದಲ್ಲಿ ಉಪಯೋಗಿಸಿಕೊಳ್ಳದೆ, ಸರ್ಕಾರದ ಹಣವನ್ನು ದುರುಪಯೋಗ ಪಡಿಸಿಕೊಂಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುತ್ತದೆ. ಆದ್ದರಿಂದ, ಈಬಗ್ಗೆ ಕೂಲಂಕುಷವಾಗಿ ಪರಿಶೀಲಿಸಿ ತಪ್ಪಿತಸ್ಥರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳು, ಚಿತ್ರದುರ್ಗ ಜಿಲ್ಲೆ, ಇವರಿಗೆ ಪತ್ರ ವ್ಯವಹಾರ ಮಾಡಬಹುದಾಗಿದೆ" ಎಂಬ ಅಭಿಪ್ರಾಯ ನೀಡಿರುತ್ತಾರೆ.

7. ಆದ್ದರಿಂದ, 2 ಮತ್ತು 3ನೇ ಎದುರುದಾರರನ್ನು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಿ ಆಕ್ಷೇಪಣೆ ಸಲ್ಲಿಸುವಮತೆ ಆದೇಶಿಸಲಾಗಿತ್ತು. 2 ಮತ್ತು 3ನೇ ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿದ್ದು, ಆಕ್ಷೇಪಣೆಯಲ್ಲಿ ದೂರುದಾರರಿಗೆ ದೂರನ್ನು ಸಲ್ಲಿಸಲು ಯಾವುದೇ ಅಧಿಕಾರವಿರುವುದಿಲ್ಲ. ರಥದ 4 ಚಕ್ರಗಳನ್ನು ದುರಸ್ತಿಗೊಳಿಸಿ ಕಾರ್ಯ ಪೂರ್ಣಗೊಳಿಸಿದ್ದು, ಕಾಮಗಾರಿಯನ್ನು ವಿನ್ಯಾಸ್ ಅಸೋಸಿಯೇಟ್ಸ್‌ರವರು ಪರಿಶೀಲನೆ ನಡೆಸಿ ಯಾವುದೇ ನ್ಯೂನತೆಗಳಿರುವುದಿಲ್ಲ ಮತ್ತು ಕಾಮಗಾರಿ ತೃಪ್ತಿಕರವಾಗಿದೆಯೆಂದು ವರದಿಯನ್ನು ನೀಡಿರುತ್ತಾರೆ. ರಥದ ಚಕ್ರಗಳನ್ನು ಪರಿಶೀಲಿಸಲಾಗಿದ್ದು, ಸಂಪೂರ್ಣವಾಗಿ ಪೂರ್ಣಗೊಂಡಿದ್ದು, ರಥವನ್ನು ಉಪಯೋಗಿಸಿರುವಂತೆ ಕಂಡುಬರುತ್ತದೆಯೆಂದು ವರದಿ ನೀಡಿರುತ್ತಾರೆ. ಸದರಿ ವರದಿಗೆ ವಿರುದ್ಧವಾಗಿ ಲೋಕಾಯುಕ್ತ ಪೊಲೀಸರು ತಪ್ಪು ವರದಿಯನ್ನು ನೀಡಿರುತ್ತಾರೆ. ಸದರಿಯವರು ಸರ್ಕಾರಿ ನೌಕರರಾಗಿರುವುದಿಲ್ಲವೆಂದು ವರದಿಯಲ್ಲಿ ತಿಳಿಸಿರುತ್ತಾರೆ.

8. ತನಿಖಾಧಿಕಾರಿಯ ವರದಿಯನ್ನು ಪರಿಶೀಲಿಸಿದಾಗ, 2 ಮತ್ತು 3ನೇ ಎದುರುದಾರರು ಕಳಪೆ ಗುಣಮಟ್ಟದ ಕೆಲಸಗಳನ್ನು ಮಾಡಿಸಿ ಹಣವನ್ನು ದುರುಪಯೋಗ ಪಡಿಸಿಕೊಂಡಿರುತ್ತಾರೆಂದು ವರದಿಯಲ್ಲಿ ತಿಳಿಸಿರುವುದು ಕಂಡುಬರುತ್ತದೆ. ವರದಿಯನ್ನು ಪರಿಶೀಲಿಸಿದಾಗ, ಎದುರುದಾರರು ಮಾಡಿಸಿರುವ ಕಾಮಗಾರಿಗೆ ರೂ.2,74,000/- ತಗಲಿರಬಹುದೆಂದು ಅಂದಾಜಿಸಿದ್ದು, ಆದರೆ ರೂ.8 ಲಕ್ಷಗಳಿಗೂ ಮೇಲ್ಪಟ್ಟು ವೆಚ್ಚ ಮಾಡಿರುವುದು ವರದಿಯಲ್ಲಿ ಕಂಡುಬರುತ್ತದೆ. 2 ಮತ್ತು 3ನೇ ಎದುರುದಾರರು ಹಣವನ್ನು ದುರುಪಯೋಗ ಪಡಿಸಿಕೊಂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿದ್ದು, ಸದರಿಯವರ ವಿರುದ್ಧ ಕ್ರಿಮಿನಲ್ ಪ್ರಕರಣವನ್ನು ಹೂಡಲು ಅವಕಾಶವಿದ್ದು, ದುರುಪಯೋಗ ಪಡಿಸಿಕೊಂಡ ಹಣದ ವಸೂಲಾತಿ ಕೂಡ ಮಾಡಬೇಕಾಗುತ್ತದೆ.

9. ಮೇಲ್ಕಂಡ ಹಿನ್ನೆಲೆಯಲ್ಲಿ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ 2 ಮತ್ತು 3ನೇ ಎದುರುದಾರರ ವಿರುದ್ಧ ಕ್ರಿಮಿನಲ್ ಪ್ರಕರಣ ಹೂಡಿ ದುರುಪಯೋಗ ಪಡಿಸಿಕೊಂಡ ಹಣವನ್ನು ವಸೂಲು ಮಾಡುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಈ ಮೂಲಕ ಶಿಫಾರಸ್ಸು ಮಾಡಲಾಗಿರುತ್ತದೆ. ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ **ಒಂದು ತಿಂಗಳೊಳಗೆ** ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2) ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)
**ಉಪಲೋಕಾಯುಕ್ತರು-2,**
ಕರ್ನಾಟಕ ರಾಜ್ಯ, ಬೆಂಗಳೂರು.